For More JobNews Visit: www.kpscvaani.com

ಸಂಖ್ಯೆ: ಬಿ9–ನೇಮಕಾತಿ–ವಿವ–1/2019–20

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ಇವರ ಕಚೇರಿ,
ಅರಣ್ಯ ಭವನ, ಮಲ್ಲೇಶ್ವರಂ,
ಬೆಂಗಳೂರು–3, ದಿನಾಂಕ: 18.08.2021

**ಇವರಿಗೆ**
ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
ಬೆಂಗಳೂರು ವೃತ್ತ / ಬೆಳಗಾವಿ ವೃತ್ತ / ಬಳ್ಳಾರಿ ವೃತ್ತ/
ಚಾಮರಾಜನಗರ ವೃತ್ತ / ಚಿಕ್ಕಮಗಳೂರು ವೃತ್ತ /
ಧಾರವಾಡ ವೃತ್ತ / ಹಾಸನ ವೃತ್ತ / ಕೆನರಾ ವೃತ್ತ / ಮೈಸೂರು ವೃತ್ತ /
ಮಂಗಳೂರು ವೃತ್ತ / ಶಿವಮೊಗ್ಗ ವೃತ್ತ

63 ಜರೂರು

**ವಿಷಯ:** 339 ಅರಣ್ಯ ರಕ್ಷಕ ಹುದ್ದೆಗಳ ನೇಮಕಾತಿ ಕುರಿತಂತೆ 1:20 (ಹುದ್ದೆ : ಅಭ್ಯರ್ಥಿ) ಪಟ್ಟಿಯಲ್ಲಿನ ಅರ್ಹ ಅಭ್ಯರ್ಥಿಗಳಿಗೆ ದೈಹಿಕ ಪರೀಕ್ಷೆಗಳನ್ನು ಏರ್ಪಡಿಸುವ ಕುರಿತು.

**ಉಲ್ಲೇಖ:**
1. ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಬಿ9–ನೇಮಕಾತಿ–ವಿವ–01/2019–20, ದಿನಾಂಕ: 02.03.2020.
2. ಈ ಕಛೇರಿಯ 1:20 ಅಂತಿಮ ಅರ್ಹತಾ ಪಟ್ಟಿ ಪ್ರಕಟಣೆ ದಿನಾಂಕ: 17.08.2021.

* * * * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ–(1) ರ ಈ ಕಛೇರಿ ಅಧಿಸೂಚನೆ ಮೂಲಕ 339 ಅರಣ್ಯ ರಕ್ಷಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳನ್ನು ಮೆರಿಟ್ ಹಾಗೂ ವೃತ್ತವಾರು ಅಧಿಸೂಚಿತ ರೋಸ್ಟರ್ ಬಿಂದುಗಳನುಸಾರ ಪರಿಗಣಿಸಿ ದೇಹದಾರ್ಢ್ಯತೆ, ದೈಹಿಕ ತಾಳ್ವಿಕೆ ಹಾಗೂ ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆಗಳಿಗೆ ಅರ್ಹತೆ ಹೊಂದಿದ 1:20 (ಹುದ್ದೆ:ಅಭ್ಯರ್ಥಿ) ಅಂತಿಮ ಪಟ್ಟಿಯನ್ನು ಉಲ್ಲೇಖ–(2)ರ ಈ ಕಛೇರಿ ಪ್ರಕಟಣೆ ಮೂಲಕ ಪ್ರಕಟಿಸಲಾಗಿರುತ್ತದೆ.

1:20 (ಹುದ್ದೆ:ಅಭ್ಯರ್ಥಿ) ಅಂತಿಮ ಪಟ್ಟಿಯಲ್ಲಿನ ಅರ್ಹ ಅಭ್ಯರ್ಥಿಗಳಿಗೆ ವೃತ್ತವಾರು ದೈಹಿಕ ಪರೀಕ್ಷೆಗಳನ್ನು ದಿನಾಂಕ: 27.09.2021 ರಿಂದ 01.10.2021 ರವರೆಗೆ ನಡೆಸಲು ಸಂಭಾವ್ಯ ದಿನಾಂಕವನ್ನು ನಿಗಧಿಪಡಿಸಲಾಗಿರುತ್ತದೆ. ವಿವರ ಕೆಳಗಿನಂತಿದೆ.

| ಕ್ರ.ಸಂ | ವೃತ್ತ | ಅಧಿಸೂಚಿತ ಹುದ್ದೆಗಳ ಸಂಖ್ಯೆ | 1:20 ಪಟ್ಟಿಯಲ್ಲಿನ ಅರ್ಹ ಅಭ್ಯರ್ಥಿಗಳ ಸಂಖ್ಯೆ | ಪರೀಕ್ಷಾ ದಿನಾಂಕ |
|---|---|---|---|---|
| 1. | ಚಿಕ್ಕಮಗಳೂರು | 10 | 180 | 27.09.2021 ರಿಂದ 01.10.2021 ರೊಳಗೆ ಯಾವುದಾದರೂ ಒಂದು ದಿನಾಂಕವನ್ನು ನಿಗಧಿಪಡಿಸುವುದು |
| 2. | ಚಾಮರಾಜನಗರ | 38 | 497 | |
| 3. | ಬಳ್ಳಾರಿ | 15 | 244 | |
| 4. | ಧಾರವಾಡ | 13 | 237 | |
| 5. | ಹಾಸನ | 20 | 381 | |
| 6. | ಮಂಗಳೂರು | 17 | 228 | |
| 7. | ಮೈಸೂರು | 20 | 340 | |
| 8. | ಬೆಳಗಾವಿ | 21 | 385 | |
| 9. | ಬೆಂಗಳೂರು | 45 | 806 | 27.09.2021 ರಿಂದ 01.10.2021 ರೊಳಗೆ ಪ್ರತಿದಿನ 403 + 403 ಅಭ್ಯರ್ಥಿಗಳಂತೆ 2 ದಿನವನ್ನು ನಿಗಧಿಪಡಿಸುವುದು. |

For More JobNews Visit: www.kpscvaani.com

| ಕ್ರ.ಸಂ | ವೃತ್ತ | ಅಧಿಸೂಚಿತ ಹುದ್ದೆಗಳ ಸಂಖ್ಯೆ | 1:20 ಪಟ್ಟಿಯಲ್ಲಿನ ಅರ್ಹ ಅಭ್ಯರ್ಥಿಗಳ ಸಂಖ್ಯೆ | ಪರೀಕ್ಷಾ ದಿನಾಂಕ |
|---|---|---|---|---|
| 10. | ಶಿವಮೊಗ್ಗ | 56 | 968 | 27.09.2021 ರಿಂದ 01.10.2021 ರೊಳಗೆ ಪ್ರತಿದಿನ 300 + 300 + 368 ಅಭ್ಯರ್ಥಿಗಳಂತೆ 3 ದಿನವನ್ನು ನಿಗಧಿಪಡಿಸುವುದು. |
| 11. | ಕೆನರಾ | 84 | 1499 | 27.09.2021 ರಿಂದ 01.10.2021 ರೊಳಗೆ ಪ್ರತಿದಿನ 400 + 400 + 400 + 299 ಅಭ್ಯರ್ಥಿಗಳಂತೆ 4 ದಿನವನ್ನು ನಿಗಧಿಪಡಿಸುವುದು. |
| ಒಟ್ಟು | | **339** | **5765** | |

ಮೇಲಿನಂತೆ, ಕ್ರೀಡಾಂಗಣವನ್ನು ಕಾಯ್ದಿರಿಸಿ, ಪರೀಕ್ಷಾ ದಿನಾಂಕ ಹಾಗೂ ದೈಹಿಕ ಪರೀಕ್ಷಾ ಕೇಂದ್ರದ ವಿವರವನ್ನು ಹಾಗೂ ಮೇಲಿನ ಅಭ್ಯರ್ಥಿಗಳಿಗೆ ದೈಹಿಕ ಪರೀಕ್ಷೆಯನ್ನು ನಡೆಸಲು ತಗಲುವ ಅಂದಾಜು ವೆಚ್ಚದ ವಿವರವನ್ನು ಈ ಕಛೇರಿಗೆ ದಿನಾಂಕ: 25.08.2021 ರೊಳಗೆ ಇ-ಮೇಲ್ ಮೂಲಕ ಸಲ್ಲಿಸಲು ಸೂಚಿಸಿದೆ.

(ಇ-ಮೇಲ್ ವಿಳಾಸ: pccfrecruitment@gmail.com)

18/8/21

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯಪಡೆ ಮುಖ್ಯಸ್ಥರು)